ನಿಹಾಲ್ ಸರಿನ್ ಹತ್ತನೇ ಸ್ಥಾನದಲ್ಲಿದ್ದರೆ, ತಮಿಳುನಾಡಿನ ಪ್ರಗ್ನಾನಂದ ಆರ್. 11ನೇ, ಮಹಾರಾಷ್ಟ್ರದ ರೌನಕ್ ಸಾಧ್ವಾನಿ 15ನೇ ಮತ್ತು ಗೋವಾದ ಲಿಯಾನ್ ಮೆಂಡೊನ್ಸಾ 19ನೇ ಸ್ಥಾನದಲ್ಲಿದ್ದಾರೆ. ಇವರೆಲ್ಲರೂ ಪ್ರೌಢಶಾಲಾ ಹಂತದಲ್ಲೇ ಗ್ರ್ಯಾಂಡ್‌ಮಾಸ್ಟರ್‌ಗಳಾದವರು.

ಫಿಡೆ ಸೀನಿಯರ್ ಕ್ರಮಾಂಕಪಟ್ಟಿಯಲ್ಲಿ ಭಾರತದ ಆಟಗಾರರ ಪೈಕಿ ವಿಶ್ವನಾಥನ್ ಆನಂದ್ (ರೇಟಿಂಗ್: 2756) ಈಗಲೂ ಮುಂಚೂಣಿಯಲ್ಲಿದ್ದು, 13ನೇ ಸ್ಥಾನದಲ್ಲಿದ್ದಾರೆ. 53ರ ವಯಸ್ಸಿನಲ್ಲೂ ಅವರು ಸಕ್ರಿಯ ಆಟಗಾರರಾಗಿರುವುದು ಅಸಾಧಾರಣ ವಿಷಯ. ದೇಶದ ಹಲವಾರು ಆಟಗಾರರಿಗೆ ಪ್ರೇರಣೆಯಾಗಿರುವ 'ವಿಶಿ', ಕಿರಿಯ ಆಟಗಾರರ ಪಾಲಿಗೆ 'ಆನಂದ್ ಸರ್'.

## ಒಲಿಂಪಿಯಾಡ್ ಸವಾಲು

ಅರ್ಜುನ್ ಎರಿಗೈಸಿ (2689), ಗುಕೇಶ್ ದೊಮ್ಮರಾಜು (2684), ನಿಹಾಲ್ ಸರಿನ್ (2651), ಪ್ರಗ್ನಾನಂದ (2648), ರೌನಕ್ ಸಾಧ್ವಾನಿ (2611) ಅವರು ಭಾರತದಲ್ಲಿ ಮೊದಲ ಬಾರಿ ನಡೆಯಲಿರುವ ಅತಿ ದೊಡ್ಡ ಚೆಸ್ ಉತ್ಸವ 'ವಿಶ್ವ ಚೆಸ್ ಒಲಿಂಪಿಯಾಡ್'ನಲ್ಲಿ ಸ್ಥಾನ ಪಡೆದಿದ್ದಾರೆ. 'ಭಾರತದ ಚೆಸ್ ರಾಜಧಾನಿ' ಚೆನ್ನೈ ಸಮೀಪದಲ್ಲಿರುವ ಚಾರಿತ್ರಿಕ ಮಹಾಬಲಿಪುರಂನಲ್ಲಿ ಜುಲೈ 28ರಿಂದ ಆಗಸ್ಟ್ 10ರವರೆಗೆ ಒಲಿಂಪಿಯಾಡ್‌ನ 44ನೇ ಆವೃತ್ತಿ ನಿಗದಿಯಾಗಿದೆ. ಕಿರಿಯ ಆಟಗಾರರಿಗೆ ತಮ್ಮ ಸಾಮರ್ಥ್ಯ ಪ್ರದರ್ಶಿಸಲು ಒಲಿಂಪಿಯಾಡ್ ಉತ್ತಮ ವೇದಿಕೆಯಾಗಿದೆ.

ವಿಶ್ವ ಚದುರಂಗದ ನಕಾಶೆಯಲ್ಲಿ ಭಾರತದ ಕಿರಿಯ ಆಟಗಾರರು ಬೆಳ್ಳಿಬೆಳಕು ಮೂಡಿಸುತ್ತಿದ್ದಾರೆ. ಆ ಚೋಟಾ ಚಾಂಪಿಯನ್‌ಗಳ ಸಾಧನೆಯ ಸಂಕ್ಷಿಪ್ತ ನೋಟ ಇಲ್ಲಿದೆ.

## ವಾಮನ ಪ್ರತಿಭೆ ಗುಕೇಶ್

ಭಾರತದ ಅತಿ ಕಿರಿಯ ಮತ್ತು ವಿಶ್ವದ ಮೂರನೇ ಅತಿ ಕಿರಿಯ ಗ್ರ್ಯಾಂಡ್‌ಮಾಸ್ಟರ್ (ಜಿಎಂ) ಎಂಬ ಶ್ರೇಯಸ್ಸು 16 ವರ್ಷದ ಗುಕೇಶ್ ದೊಮ್ಮರಾಜು (ಜನನ: 2952006) ಅವರದ್ದು. 2019ರ ಮಾರ್ಚ್‌ಲ್ಲಿ ಜಿಎಂ ಪದವಿ ಪಡೆದಾಗ ಗುಕೇಶ್ ವಯಸ್ಸು ಕೇವಲ 12 ವರ್ಷ, 7 ತಿಂಗಳು, 17 ದಿನ.



ರಾಷ್ಟ್ರೀಯ, ಅಂತರರಾಷ್ಟ್ರೀಯ ಟೂರ್ನಿಗಳಲ್ಲಿ ಹಲವು ಪ್ರಶಸ್ತಿಗಳನ್ನು ಗೆದ್ದುಕೊಂಡಿರುವ ಗುಕೇಶ್ ಈ ವರ್ಷವೂ ಉತ್ತಮ ಯಶಸ್ಸು ಕಂಡಿದ್ದಾರೆ. ಏಪ್ರಿಲ್–ಮೇ ತಿಂಗಳಲ್ಲಷ್ಟೇ ಬೆನ್ನುಬೆನ್ನಿಗೆ ಮೂರು ಪ್ರಶಸ್ತಿಗಳನ್ನು ಗೆದ್ದು ಸುದ್ದಿಯಾಗಿದ್ದಾರೆ. ಸ್ಪೇನ್‌ನಲ್ಲಿ ನಡೆದ ಚೆಸೇಬಲ್ ಸನ್‌ವೇ ಫಾರ್ಮೆಂಟೇರಾ ಓಪನ್, ಲಾ ರೋಡಾ ಮತ್ತು ಮೆನೋರ್ಕಾ ಓಪನ್‌ನಲ್ಲಿ ಚಾಂಪಿಯನ್ ಪಟ್ಟಕ್ಕೇರಿ ಹ್ಯಾಟ್ರಿಕ್ ಪೂರೈಸಿದ್ದರು. ಚೆಸೇಬಲ್ ಟೂರ್ನಿಯ 9 ಸುತ್ತುಗಳಲ್ಲೂ ಅಜೇಯರಾಗುಳಿದಿದ್ದು ಈ ಆಟಗಾರನ ಸಾಮರ್ಥ್ಯಕ್ಕೆ ಸಾಕ್ಷಿ ಹಿಡಿಯುತ್ತದೆ. ಈ ವರ್ಷದ ಏಪ್ರಿಲ್‌ನಲ್ಲಿ ವಿಶ್ವದ ಅಗ್ರ 100 ಆಟಗಾರರ ಕ್ರಮಾಂಕಪಟ್ಟಿಯಲ್ಲಿ ಸ್ಥಾನ ಪಡೆದ ಅತಿ ಕಿರಿಯ ಆಟಗಾರ (15 ವರ್ಷ) ಎನಿಸಿದ್ದರು. ಪ್ರಸಕ್ತ ವರ್ಷದ ಸೀನಿಯರ್ ರಾಷ್ಟ್ರೀಯ ಚಾಂಪಿಯನ್‌ಷಿಪ್‌ನಲ್ಲಿ ಮೊದಲ ಸ್ಥಾನಕ್ಕೆ ಸಮನಾದ ಅಂಕ ಗಳಿಸಿದರೂ ಟೈಬ್ರೇಕರ್‌ನಲ್ಲಿ ಎರಡನೇ ಸ್ಥಾನಕ್ಕಿಳಿಯಬೇಕಾಯಿತು.

## ಚಾಂಪಿಯನ್ ಪ್ರಗ್ನಾನಂದ

ಚೆನ್ನೈನ ಪ್ರಗ್ನಾನಂದ ರಮೇಶ್‌ಬಾಬು (ಜನನ: 1082005) ಈ ಎಳೆಯರಲ್ಲಿ ಮೊದಲು ಗ್ರ್ಯಾಂಡ್‌ಮಾಸ್ಟರ್ ಆಗಿ ಸುದ್ದಿ ಮಾಡಿದವರು. ಅವರು 12 ವರ್ಷ, 10 ತಿಂಗಳು 12 ದಿನ

## ಏನಿದು ಚೆಸ್ ಒಲಿಂಪಿಯಾಡ್?

ವಿಶ್ವದ ಸಾರ್ವಭೌಮ ಚೆಸ್ ತಂಡವನ್ನು ನಿರ್ಧರಿಸಲು ಎರಡು ವರ್ಷಗಳಿಗೊಮ್ಮೆ ನಡೆಯುವ ಚೆಸ್ ಹಬ್ಬವೇ ವಿಶ್ವ ಚೆಸ್ ಒಲಿಂಪಿಯಾಡ್. ಮೊದಲ ಬಾರಿ ಅಧಿಕೃತ ಚೆಸ್ ಒಲಿಂಪಿಯಾಡ್ ನಡೆದಿದ್ದು 1927ರಲ್ಲಿ. ಲಂಡನ್‌ನಲ್ಲಿ ನಡೆದ ಆ ಒಲಿಂಪಿಯಾಡ್‌ನಲ್ಲಿ ಹಂಗೆರಿ ಚಿನ್ನದ ಪದಕ ಗೆದ್ದುಕೊಂಡಿತ್ತು. ಸೋವಿಯತ್ ಒಕ್ಕೂಟ (USSR) ಮತ್ತು ಅದು ಒಡೆದ ನಂತರ ರಷ್ಯಾ ತಂಡವೇ ಒಲಿಂಪಿಯಾಡ್‌ನಲ್ಲಿ ಹೆಚ್ಚಿನ ಚಿನ್ನದ ಪದಕಗಳನ್ನು ಗೆದ್ದುಕೊಂಡಿದೆ.

ಎರಡು ಮಹಾಯುದ್ಧಗಳ ಮತ್ತು ಕೋವಿಡ್ ಸಾಂಕ್ರಾಮಿಕದ ಅವಧಿಯಲ್ಲಿ ಮಾತ್ರ ಒಲಿಂಪಿಯಾಡ್ ನಡೆದಿರಲಿಲ್ಲ. 2018ರಲ್ಲಿ ಕೊನೆಯ ಬಾರಿ ಜಾರ್ಜಿಯಾದ ಬಟುಮಿಯಲ್ಲಿ ಒಲಿಂಪಿಯಾಡ್ ನಡೆದಿತ್ತು. ಈಗ 44ನೇ ಒಲಿಂಪಿಯಾಡ್ ಚೆನ್ನೈ ಸಮೀಪದ ಐತಿಹಾಸಿಕ ನಗರ ಮಹಾಬಲಿಪುರಂನಲ್ಲಿ (ಮಾಮಾಲ್ಲಪುರಂನಲ್ಲಿ) ನಡೆಯಲಿದೆ.

ಭಾರತ ಆತಿಥ್ಯ ವಹಿಸುತ್ತಿರುವ ಕಾರಣ ಹೆಚ್ಚುವರಿ ತಂಡಗಳನ್ನು ಕಣಕ್ಕಿಳಿಸುವ ಅವಕಾಶ ಪಡೆಯಿತು. ಹೀಗಾಗಿ ಮೊದಲು ನಾಲ್ಕು ತಂಡಗಳನ್ನು ಪ್ರಕಟಿಸಲಾಗಿತ್ತು. ಓಪನ್ ವಿಭಾಗದಲ್ಲಿ 187 ತಂಡಗಳು ನೋಂದಾಯಿಸಿಕೊಂಡಿವೆ. ತಂಡಗಳು ಸಮಸಂಖ್ಯೆಯಲ್ಲಿರಬೇಕಾದ ಕಾರಣ ಆತಿಥೇಯ ಭಾರತ ತಂಡಕ್ಕೆ ಪೇರಿಂಗ್ ನಿಯಮದ ಪ್ರಕಾರ ಇನ್ನೊಂದು ತಂಡ ಕಣಕ್ಕಿಳಿಸುವ ಅವಕಾಶ ಲಭ್ಯವಾಗಿದೆ.

ಇಷ್ಟೊಂದು ದೀರ್ಘ ಇತಿಹಾಸವಿರುವ ಒಲಿಂಪಿಯಾಡ್‌ನಲ್ಲಿ ಭಾರತ ಮೊದಲ ಸಲ ಭಾಗವಹಿಸಿದ್ದು 1956ರ ಮೆಲ್ಬರ್ನ್ ಒಲಿಂಪಿಯಾಡ್‌ನಲ್ಲಿ. ಆದರೆ ಭಾರತ ತಂಡ ಮೊದಲ ಬಾರಿ ಪದಕ ಗೆಲ್ಲಲು 2014ರವರೆಗೆ ಕಾಯಬೇಕಾಯಿತು. ಆ ವರ್ಷ ನಾರ್ವೆಯ ಟ್ರಾಮ್ಸೊದಲ್ಲಿ ಭಾರತ ಕಂಚಿನ ಪದಕ ಗೆದ್ದುಕೊಂಡಿತ್ತು. ಕೃಷ್ಣನ್ ಶಶಿಕಿರಣ್, ಸೇತುರಾಮನ್, ಭಾಸ್ಕರನ್ ಅಧಿಬನ್, ಎಂ.ಆರ್.ಲಲಿತ್‌ಬಾಬು, ಪರಿಮಾರ್ಜುನ ನೇಗಿ ತಂಡದಲ್ಲಿದ್ದರು. ಸ್ಪೇನ್‌ನ ಕೆಲ್ವಿಯಾದಲ್ಲಿ 2004ರಲ್ಲಿ ನಡೆದ ಒಲಿಂಪಿಯಾಡ್‌ನಲ್ಲಿ ಆರನೇ ಸ್ಥಾನ ಗಳಿಸಿದ್ದು, ಅದಕ್ಕಿಂತ ಹಿಂದಿನ ಉತ್ತಮ ಸಾಧನೆಯಾಗಿತ್ತು.

2014ರಲ್ಲಿ ಶಶಿಕಿರಣ್ ಮೂರನೇ ಬೋರ್ಡ್‌ನ (10 ಸುತ್ತುಗಳಲ್ಲಿ 7.5 ಅಂಕ) ಉತ್ತಮ ಸಾಧನೆಗಾಗಿ ಬೆಳ್ಳಿಯ ಪದಕ ಪಡೆದಿದ್ದರು. 1990ರ ಒಲಿಂಪಿಯಾಡ್‌ನಲ್ಲಿ (ಅವಿಭಜಿತ ಯುಗೊಸ್ಲಾವಿಯಾದ ನೊವಿ ಸಾದ್‌ನಲ್ಲಿ ನಡೆದಿತ್ತು) ದಿವ್ಯೇಂದು ಬರೂವಾ ಎರಡನೇ ಬೋರ್ಡ್‌ನಲ್ಲಿ ಉತ್ತಮ ಪ್ರದರ್ಶನಕ್ಕಾಗಿ ಚಿನ್ನದ ಪದಕ ಪಡೆದಿದ್ದು ಭಾರತದ ಆಟಗಾರನೊಬ್ಬ ಗಳಿಸಿದ ಮೊದಲ ವೈಯಕ್ತಿಕ ಪದಕವಾಗಿತ್ತು. 22 ವರ್ಷಗಳ ನಂತರ, 2012ರ ಇಸ್ತಾಂಬುಲ್ (ಟರ್ಕಿ) ಒಲಿಂಪಿಯಾಡ್‌ನಲ್ಲಿ ಭಾರತ ತಂಡದಲ್ಲಿ ನಾಲ್ಕನೇ ಬೋರ್ಡ್ ಆಡಿದ್ದ ಗ್ರ್ಯಾಂಡ್‌ಮಾಸ್ಟರ್ ಅಭಿಜಿತ್ ಗುಪ್ತಾ ಬೆಳ್ಳಿಯ ಪದಕ ಪಡೆದಿದ್ದರು. ಅದೇ ಒಲಿಂಪಿಯಾಡ್‌ನ ಮಹಿಳಾ ವಿಭಾಗದಲ್ಲಿ ತಾನಿಯಾ ಸಚ್‌ದೇವ್ ಮೂರನೇ ಬೋರ್ಡ್‌ನ ಉತ್ತಮ ಸಾಧನೆಗಾಗಿ ಕಂಚಿನ ಪದಕ ಪಡೆದಿದ್ದರು.

ಕೋವಿಡ್ ಅವಧಿಯಲ್ಲಿ ಎರಡು ಬಾರಿ ವರ್ಚುವಲ್ ಆಗಿ (2020 ಮತ್ತು 2021) ಒಲಿಂಪಿಯಾಡ್‌ಗಳು ನಡೆದಿದ್ದವು. 2020ರಲ್ಲಿ ರಷ್ಯಾ ಮತ್ತು ಭಾರತ ಜಂಟಿ ಚಾಂಪಿಯನ್ ಆಗಿದ್ದವು. 2021ರಲ್ಲಿ ರಷ್ಯಾ ಮೊದಲ ಸ್ಥಾನ, ಅಮೆರಿಕ ಎರಡನೇ ಮತ್ತು ಭಾರತ ಮೂರನೇ ಸ್ಥಾನ ಪಡೆದಿದ್ದವು. ಭಾರತ ತಂಡವನ್ನು ಕಡೆಗಣಿಸುವಂತಿಲ್ಲ ಎಂಬುದನ್ನು ಆನ್‌ಲೈನ್ ಒಲಿಂಪಿಯಾಡ್ ಸಾರಿತು.

ಈ ಬಾರಿ ಭಾರತದ 'ಎ' ಮತ್ತು 'ಬಿ' ತಂಡಗಳಿಂದ ಉತ್ತಮ ಸಾಧನೆ ನಿರೀಕ್ಷಿಸಲಾಗಿದೆ. ಅನುಭವಿ ಆಟಗಾರರಿರುವ ಭಾರತ 'ಎ' ತಂಡಕ್ಕೆ ಓಪನ್ ವಿಭಾಗದಲ್ಲಿ ಮೂರನೇ ಶ್ರೇಯಾಂಕ ನೀಡಲಾಗಿದೆ. ಉತ್ಸಾಹಿ ಎಳೆಯರನ್ನು ಹೊಂದಿರುವ 'ಬಿ' ತಂಡ 11ನೇ ಶ್ರೇಯಾಂಕ ಗಳಿಸಿದೆ. ಮಹಿಳಾ ವಿಭಾಗದಲ್ಲಿ ಭಾರತ 'ಎ' ತಂಡ ಅಗ್ರ ಶ್ರೇಯಾಂಕ ಹೊಂದಿದ್ದರೆ, 'ಬಿ' ತಂಡಕ್ಕೆ 11ನೇ ಶ್ರೇಯಾಂಕ ನೀಡಲಾಗಿದೆ.